220 (a)

Reg No. M 1299 ( Founded 1917 ) Daily & Weekly

# ಸತ್ಯವಾದಿ
SATYAVADI

( ಆರಮನೆ ಸಿದಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು )

ಸಂಪುಟ 28 ಸಂಚಿಕೆ 167 ] ಶುಕ್ರವಾರ 23—3—45 [ 3 ಪೈ

## ರೈನ್ ಯುದ್ಧಕ್ಕೆ ಸಿದ್ಧತೆ

ರೈನ್ ಯುದ್ಧಕ್ಕೆ ಜರ್ಮನರೂ ಮಿತ್ರರು ಅಗಾಧವಾದ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಭೀಕರವಾದ ಈ ಯುದ್ಧವು ಯಾವ ಕ್ಷಣದಲ್ಲಿ ಬೇಕಾದರೂ ಪ್ರಾರಂಭವಾಗಬಹುದು.

ಭಾರತದಲ್ಲಿ ಎಲ್ಲೂ ಇಲ್ಲದ ವ್ಯವಸಾಯದ ಇಕಕಂಟ್ಯಾಕ್ಸ್ ಮದರಾಸಿನಲ್ಲಿ ಜಾರಿಗೆ ಬರುವುದು.

ಈ ವರ್ಷ ಮುಂಬೈ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂತವರು 33500 ಮಂದಿ. ಇಷ್ಟು ಮಂದಿ ಹಿಂದೆ ಯಾವ ವರ್ಷದಲ್ಲೂ ಕೂತಿರಲಿಲ್ಲ.

ಪೋಲಿಷ್ ಸರ್ಕಾರದ ವಿಚಾರಾದಲ್ಲಿ ತ್ರಿಮೂರ್ತಿಗಳಲ್ಲಿ ತಿಕ್ಕಾಟ ಉಂಟಾಗಿದೆ.

ಡೂಕ್ ಆಫ್ ವಿಂಡ್ಸರರು ತಮ್ಮ ಭಾರಿ ಕಲ್ಗಾರಿ ಆಸ್ತಿಯನ್ನು ಮಾರಿ ಇಂಗ್ಲೆಂಡಿಗೆ ಜೂಕ್ ಜುಲೈನಲ್ಲಿ ಬಂದು ನೆಲಸುವರಂತೆ !

ಜರ್ಮನರು ಶಾಂತಿ ಸಂಧಾನ ಮಾಡುತ್ತಿರುವುದು ಸುಳ್ಳೆಂದು ಬ್ರಿಟನ್ನೇ ಒಪ್ಪಿಕೊಳ್ಳುತ್ತಿರುವದು.

ಜಯಪ್ರಕಾಶ ನಾರಾಯಣರಿಗೆ ಈಗ ಓದಲು ಪುಸ್ತಕ, ವರ್ತಮಾನ ಪತ್ರಿಕೆ, ಇವನ್ನೆಲ್ಲಾ ಕೊಡುತ್ತಿರುವರು.

ಇಂಗ್ಲೆಂಡಿನಲ್ಲಿ ಶಯಾರಾದ ಬೈಸಿಕಲ್ಲುಗಳ ಕ್ರಯ ಭಾರತದ್ದಕ್ಕಿಂತ ಹೇಕಡಾ 50 ರಷ್ಟು ಕಮ್ಮಿಯಾದ್ದರಿಂದ ಕೇಂದ್ರ ಸರಕಾರವು ಬ್ರಿಟಿಷ್ ಸೈಕಲ್ಲುಗಳನ್ನು ಕೊಳ್ಳಬೇಕಾಯಿತಂತೆ.

1943-44 ರಲ್ಲಿ ಭಾರತಕ್ಕೆ ಅಮೇರಿಕಾದಿಂದ 8000 ಸೈಕಲುಗಳು ಆಮದಾದುವು.

ಮದರಾಸಿನ ಶೇಂದಿ ಅಂಗಡಿಗಳ ಹರಾಜಿನಿಂದ ಸರ್ಕಾರಕ್ಕೆ 1 ಕೋಟಿ ರೂಪಾಯಿಗಿಂತ ಹೆಚ್ಚಾಗಿ ಉತ್ಪತ್ತಿಯಾಗಿದೆ.

ಅಮೇರಿಕ ಸರಕಾರವು ಭಾರತಕ್ಕೆ 60 ಮೈಕ್ರೋಸ್ಕೋಪ್‌ಗಳನ್ನು ದಾನಾ ಮಾಡಿದೆ.

ಅಮೇರಿಕಾದಲ್ಲಿ ಈಗ ಜನಸವಾಗುವ ಮಕ್ಕಳುಗಳಲ್ಲಿ 6 ರಲ್ಲಿ ಒಂದು ಮಗುವು ಸರ್ಕಾರಿ ಪೋಷಣೆಯಲ್ಲಿ ಹುಟ್ಟಿ ಬೆಳೆಯುತ್ತದೆ. ಅಂದರೆ ಅದರ ಜನಕನು ರಣರಂಗದಲ್ಲಿರುವನು.

ವೈಸರಾಯರು ಲಂಡನ್ನಿಗೆ ಪ್ರಯಾಣಮಾಡಿದ್ದು ಭಾರತಕ್ಕೆ ಡೊಮಿನಿಯನ್ ಸ್ಟೇಟನ್ನು ಕೊಡಿಸುವುದಕ್ಕೆಂದು ದೆಹಲಿಯಲ್ಲಿ ಊಹಿಸಲಾಗಿದೆ.

ರಷ್ಯಾದಲ್ಲಿ ಆಹಾರ ಪರಿಸ್ಥಿತಿ ಚಿಂತಾಜನಕವಾಗಿದೆ.

## ಬ್ರಹ್ಮಚಾರಿ ಹಿಟ್ಲರ್ !

### ಎಂದು ಮಕ್ಕಳ ತಂದೆ !

ಹಿಟ್ಲರನು 31 ವರ್ಷ ವಯಸ್ಸಿನ ನಟಿಯೊಂದಿಗೆ ಗುಟ್ಟಾಗಿ ಸಂಸಾರ ನಡಿಸುತ್ತಿದ್ದು, ಈಗ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದಿರುವನಂತೆ. ಒಂದು ಪುತ್ರ ಸಂತಾನವಾದನಂತರ ಈಕೆಯನ್ನು ಒದಿರಂಗವಾಗಿ ಪರಿಗ್ರಹಿಸುವನಂತೆ !

### ವಿಜಯವು ಯಾವಾಗಲೋ ನನಗೆ ಗೊತ್ತಿಲ್ಲ

ಮಿ || ರೂಸ್ವೆಲ್ಟರು ವಾಷಿಂಗ್ಟನ್ನಿನ ಕಾಂಗ್ರೆಸ್ ಬಗ್ಗೆ ಮಾತನಾಡುತ್ತಾ ಯುದ್ಧವಾಗ ಜಯವು ಲಭಿಸುವುದೋ ನನಗೆ ಗೊತ್ತಿಲ್ಲವೆಂದು ಹೇಳಿದರು.

### ಸಿವಿಕ್ ಮರ್ಯಾದೆ ತಪ್ಪಿತು

ಯುದ್ಧ ಗೆದ್ದಿದ್ದು ಮಿ | ಚರ್ಚಿಲ್ ಒಬ್ಬರಿಂದಲ್ಲ, ಚರ್ಚಿಲ್ ಮತ್ತು ಕಂಪನಿಯವರಿಂದ, ಎಂದು ಲೇಬರ್ ಸದಸ್ಯ ಲೀಸ್ಟರ್ ಪೌರಸಭೆಯವರು ಸಿವಿಕ್ ಮರ್ಯಾದೆ ಕೊಡದಂತೆ ಮಾಡಿದರು.

---

ರಾಜಧಾನಿಯ ಟ್ರಸ್ಟ್ ಬೋರ್ಡುಗಳ ಮಿಂಟಿಂಗು ಈ ತಿಂಗಳು ತಾ || 28 ರಲ್ಲಿ ನಡೆಯುವುದು.

ರಾಜಧಾನಿಯಲ್ಲಿ ನಿರಾಶ್ರಿತರಿಗೆ ವಸತಿ ಸೌಕರ್ಯ ಒದಗಿಸಲು ಪೌರಸಭಾ ಸದಸ್ಯರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು 2 ಲಕ್ಷ ರೂಪಾಯಿನ ಅಂದಾಜಾಪಟ್ಟಿ ಕಯಾರು ಸಿದ್ಧಪಡಿಸಿಹಾಜನರು ಉದಾರವಾಗಿ ಸಹಾಯ ಹಸ್ತ ನೀಡಬೇಕೆಂದು ಕೇಳಿರುವರು.

---




ಐ.ಜೆ. ಹಾಲ್, ಸರಾಫ್ ಅಂಗಡಿ ರಸ್ತೆ ಬೀದಿ, ಮೈಸೂರು.

## ವಾಯುಮಂಡಲದ ಅಧಿಕಾರ

ಈಚೆಗೆ ನಡೆದ ವಿಮಾನ ಸಂಚಾರ ಸಮ್ಮೇಳನದಲ್ಲಿ ಅಫ್ರಿಕಾದ ಜ || ಸ್ಮಟ್ಸ್ ರವರು ಲೈಸೆನ್ಸಿಲ್ಲದೆ ಯಾರೂ ವಾಯುಮಂಡಲದಲ್ಲಿ ಕಾರ್ಯಭಾಗ ನಡೆಸಬಾರದು ; ವಾಯುಮಂಡಲವನ್ನು ಭೂಭಾಗದಹಾಗೆ ಪ್ರತೋಟಿಯಲ್ಲಿಟ್ಟರಬೇಕು, ಎಂದರು. ಇದನ್ನು ಕೇಳಿದರೆ ನಮಗೆ ಹಿಂದಿನ ಒಂದು ವಿಷಯವು ಜ್ಞಾಪಕಕ್ಕೆ ಬರುತ್ತದೆ. 1913 ( ? ) ರಲ್ಲಿ ರಲ್ಲಿ ಇಂಗ್ಲೆಂಡಿನಲ್ಲಿ ಒಬ್ಬನು ಕುರಿ ಕಾಯುತ್ತಿದ್ದನು. ಆಗ ಒಂದು ವಿಮಾನದ ಆರ್ಭಟದಿಂದ ಅನೇಕ ಕುರಿಗಳು ನೀರಿನ ಪಾಲಾದವು. ಕುರುಬನು ನಷ್ಟಕ್ಕೆ ವಿಮಾನದನಸ್ಸಿನೇಲೆ ದಾವಾ ಹೂಡಿದನು. ನ್ಯಾಯಾಧೀಶರು ' ನಮಗೆ ಅಧಿಕಾರ ಭೂಮಿಯ ಮೇಲೆ ನಡೆಯುವ ವ್ಯಾಜ್ಯಗಳ ಮೇಲೆ ಮಾತ್ರ, ಅಂತರಿಕ್ಷ ವ್ಯಾಜ್ಯಗಳ ಅಧಿಕಾರ ಇನ್ನೂ ಬಂದಿಲ್ಲ ಎಂದು ಅರ್ಜಿ ವಜಾ ಮಾಡಿದರು.

o o

## ಜಪಾನಿನ ಸ್ಥಿತಿಗತಿ

ಅದೇಕರು ತಿಳಿದಿರುವಂತೆ ಜಪಾನ್ ಚಿಕ್ಕ ಚಿಕ್ಕ ದ್ವೀಪಗಳ ಸಮೂಹವಲ್ಲ. ಅಥವಾ ಕಾಗದಗಳಿಂದ ಕಟ್ಟಿದ ಮನೆಗಳಲ್ಲ. ಈಗ ಎರಡು ವರ್ಷಗಳಿಂದ ಒಹು ನಿಧಿ ನಿಕ್ಷೇಪ ಸಿಕ್ಕಿದೆ. ತನ್ನ ಬುಡವನ್ನು ಭದ್ರಪಡಿಸಿಕೊಂಡಿದೆ. ತನ್ನದೇ 730 ಸಾವಿರ ಚದರ ಮೈಲಿ ರಾಜ್ಯದಲ್ಲಿ ಕೈಗಾರಿಕೆ, ವ್ಯವಸಾಯ, ಉತ್ಪತ್ತಿ ಪಡಿಸಿಕೊಂಡಿದೆ. ಜರ್ಮನಿಯ ಮೂರರಷ್ಟು ವಿಸ್ತಾರವಾಗಿದೆ.— ಎಂದು ಅಮೇರಿಕ ಮುಖ್ಯ ನಾಯಕರಾದ ಜ || ಅರ್ನಾಲ್ಡರು ಹೇಳಿಕೆ ಕೊಟ್ಟಿದ್ದಾರೆ.

o o

## ಆಕಾಶವಾಣಿ 24—3—45

ಪ್ರಾತ್ಕಾಂಕ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6.30, 7.30, ರಾತ್ರಿ 10. ಬೆ. 8 ವೇಣುವಾದನ. ಮ. 2 ಶ್ರೀಮತಿ ಭಾಯರವರ ಸಂಗೀತ, 2-15 ಸಂಭಾಷಣೆ. 2-40 ವೇಲುಕೋಟೆಯಲ್ಲಿ ವೈರಮುಡಿ ; ಸಾ. 6 ತಂತ್ರೀವಾದ್ಯ, 7-15 ಭಜನೆ ; 7-50 ಸುಧನ್ವ ನಾಟಕ ರಾ. 8-36 ಲವಕುಶ ಕೀರ್ತನೆ, 9-45 ಶ್ರೀ ಸುಂದರಾಚಾರ್‌ರಿಂದ ' ನ್ಯೂ ಕ್ಲಿಯರ್ ಫಿಷನ್ ' ಭಾಷಣ.

---

ಮೈಸೂರು ಡಿ || ಬೋರ್ಡ್ ವೈಸ್ ಪ್ರೆಸಿಡೆಂಟ್ ಚುನಾವಣೆಯು ಈ ತಿಂಗಳು ತಾ || 28 ರಲ್ಲಿ ನಡೆಯುವುದು.

# ವಾರ್ತಾತರಂಗ

ಗೋದಾವರಿ ನದಿಗೆ ರಾಜಮಹೇಂದ್ರಿ ಬಳಿ 70 ಕೋಟಿ ರೂಪಾಯಿನ ಅಂದಾಜಿನಲ್ಲಿ ಅಮೇರಿಕನ್ನರ ಮೇಲ್ವಿಚಾರಣೆಯಲ್ಲಿ ಒಂದು ಆಣೆಕಟ್ಟೆಯನ್ನು ಕಟ್ಟುವರು. ಇದು ಮೆಟ್ಟೂರು ಜಲಾಶಯಕ್ಕಿಂತ 5 ರಷ್ಟು ದೊಡ್ಡದು. ಇದರಿಂದ 20 ಲಕ್ಷ ಎಕರೆ ಜಮೀನಿನಲ್ಲಿ ಭತ್ತ ಬೆಳೆಯಬಹುದು. ಇಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸಬಹುದೆಂದು ಹೋದ ವರ್ಷ ಒಬ್ಬರು ಸೈಸೂರು ಅಧಿಗಳು ಅಭಿವ್ಯಾಯಪಟ್ಟಿದ್ದರು.

ಬ್ರಿಟಿಷ್ ವಿಜ್ಞಾನಿಯೊಬ್ಬನು ಒಂದು ತರಹ ಕಾಜನ್ನು ತಯಾರ್ಮಾಡಿರುವನು. ಇದೆನ್ನು ಕಿಟಕಿಗಳಿಗೆ ಉಪಯೋಗಿಸಿದರೆ, ಮನುಷ್ಯನು ಬಿಡುವ ಕೆಟ್ಟ ಗಾಳಿಯನ್ನು ಓಡಿಸುವುದು. ನೊಣ ಸೊಳ್ಳೆ ಇವುಗಳು ಆ ಗಾಜಿನ ಬಳಿ ಬಂದಕೂಡಲೇ ನಾಯುವುವು. ಮೈಸೂರು ಪೌರಸಭೆಯವರು ಈ ಗಾಜನ್ನು ತರಿಸಿ, ರಾಜಾರಾಂ ಅಗ್ರಹಾರದ ನಿವಾಸಿಗಳಿಗೆ ಹಂಚಿದರೆ ಮಹದುಪಕಾರವಾಗುವುದು.

ಬೆಳಗಾವಿನಲ್ಲಿರುವ ಪೋ ॥ ಸ ॥ ಇನ್ಸ್‌ಪೆಕ್ಟರು ವಾಗಲೆರವರ ಮನೆಗೆ ಇಬ್ಬರು ಬ್ರಿಟಿಷ್ ಸಿಪಾಯಿಗಳು ಕುಡಿದು ನುಗ್ಗಿದರು. ವಾಗಲೆಯವರು ಇವರನ್ನು ಅಟ್ಟಲು ಎರಡು ಗುಂಡು ಹಾರಿಸಬೇಕಾಯಿತು. ಈಗ ಇವರನ್ನು ಸಸ್ಪೆಂಡು ಮಾಡಿ ವಿಚಾರಣೆ ನಡೆಯುತ್ತಿದೆ.

ಯಾಕಕ್ಕೆ ಡ್ಯೂಕ್ ಆಫ್ ವಿಂಜ್ಸರರ ರಾಜೀನಾಮೆ ವಿಷಯದಲ್ಲಿ ನೃತ್ತ ಪತ್ರಿಕೆಗಳು ಸಭ್ಯ ರೀತಿಯಲ್ಲಿ ವರ್ತಿಸಬೇಕೆಂದು ಆಜ್ಞೆ ಮಾಡಿದರೆಂದು ಮಿ ॥ ಚರ್ಚಿಲ್ಲರಿಗೆ ಪಾರ್ಲಿಮೆಂಟು ಸದಸ್ಯರಾದ ಕರ್ನಲ್ಲರು ಪ್ರಶ್ನೆ ಹಾಕಿರುತ್ತಾರೆ.

ಅಮೇರಿಕಾ ಜನರಿಗೆ ಆಹಾರ ಕಮ್ಮಿ ಮಾಡಬೇಕೆಂದು ನಿಶ್ಚಯಿಸಿದ್ದಾರೆ.


ರಕ್ತವೃದ್ಧಿಗೆ — ಧಾತುಪುಷ್ಟಿಗೆ

# ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ ಲಿಂಟೆಡ್ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

**At Ranjit Pagli Duniya**

ರಣಜಿತ್ ಟಾಕೀಸಿನಲ್ಲಿ

## ಪಗಲಿದುನಿಯಾ

(ಹಿಂದಿ)

ಮುಮ್ತಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

ಪ್ರತಿ ದಿನ 3 ಆಟಗಳು

**AT OPERA — DOST**

## ಅಪೆರಾ ಟಾಕೀಸ್

ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

## ದೋಸ್ತ್ (ಹಿಂದಿ)

— NEXT CHANGE —

**Air Raid Wardens**

With Stan Laurel & Oliver Hardy

**TALK-A-TONE**

(The Pioneer Film-mag of S. India)

From 1-3-45 Re. 1 per copy

Local Agent—D. Mahaadev

Opera Talkies, Mysore

**Good Coffee**

Sastry's Coffee Rooms

Chamarajapuram, Mysore

For Good Printing—

**L. N. Press**

Sriranpet MYSORE

ಅಕ್ಕ ಸಾಮಾಜಿಕ

ಭಾವಪರಿಪೂರ್ಣವಾದ ಆಕ್ಕ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ

ವರೆಗೂ ಊಟಕ್ಕೆ ಕೂಡ ಏಳಲು ಮನ

ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ

ಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಏಜೆನ್ಸಿ, ಮೈಸೂರು

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅವರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

..... ಶ್ರೀ ಓಂ ಬ್ರಾಂಡ್ ಕೇಸರಿ .....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟೆಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಪೂರೈಸಿರು ಮತ್ತು —

ವಲ್ಲಭದಾಸ್ ತೇಜ್‌ಪಾಲ್ ಹಿಂಗ್ಸು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ ಬೀದಿ ಚಿಟ್ಟಿ. ಮದರಾಸ್.


Edited, Printed and published by M. S. Krishna Rao, at the Satyavadi Press, Chamareja Agrahar, Mysore.